**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ**

**ನ್ಯಾಯಾಲಯ, ಆಳಂದ.**

**ಸಿ.ಸಿ.ನಂಃ 292/2019** ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ದಯಾನಂದ |
| ತಂದೆಃಗಂಡ | ಃ | ಲಕ್ಷ್ಮಣ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಕೆರೂರ |

ದಿನಾಂಕಃ06.07.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-2 ರಿಂದ 3 ಮತ್ತು 7 ರಿಂದ 10, 12, 13 ರವರ ಪರಿಚಯ ಇರುತ್ತದೆ ಚಾಸಾ-4 ನನ್ನ ತಾಯಿ. ಚಾಸಾ-5 ನನ್ನ ಹೆಂಡತಿ. ಚಾಸಾ-6 ನನ್ನ ಅತ್ತಿಗೆ, ಚಾಸಾ-11 ಅಣ್ಣ ಇರುತಾತ್ತರೆ. 07.03.2019 ರಂದು ಮನುಕಿ ದ್ರಾಕ್ಷಿ ಶೆಡ್ ಇತ್ತು. ದ್ರಾಕ್ಷಿ ಹಾಕಲು ಶೆಡ್ ತಯಾರಿಸುತ್ತಿದ್ದೇವು. ಜಾಳಗಿ ಹೊಲೆಯುತ್ತಿರುವಾಗ ಕರೆಂಟ ವೈಯರ ಕೆಳಗೆ ಬಿದ್ದು ನನ್ನ ಕುತ್ತಿಗೆಗೆ ಹತ್ತಿರುತ್ತದೆ. ಆಗ ನಾನು ಶೆಡ್ಡಿನ ಎಂಗಲ್ ಪಟ್ಟಿಯ ಮೇಲೆ ನಿಂತಿದ್ದಾಗ ಕರೆಂಟ ಕಾಲಿನಿಂದ ಪಾಸಾಗಿ ಬ್ಲಾಸ್ಟ ಆಗಿರುತ್ತದೆ. ನಂತರ ನಾನು ಆಯ ತಪ್ಪಿ ಬಿದ್ದಿರುತ್ತೇನೆ. ನನ್ನನ್ನು ಸೋಲಾಪೂರ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದ 2 ಗಂಟೆಗಳ ನಂತರ ಪ್ರಜ್ಞೆ ಬಂದಿರುತ್ತದೆ. ನಾನು ದೂರನ್ನು ದಾಖಲಿಸಿರುತ್ತೇನೆ.

**ಪಾಟೀ ಸವಾಲು ಆರೋಪಿಗಳ ಪರ ಎ.ಡಬ್ಲ್ಯೂ.ಎ. ವಕೀಲರಿಂದ.**

ಆರೋಪಿ ಪರ ವಕೀಲರು ಗೈರು ಹಾಜರು ಇದ್ದ ಕಾರಣ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.